ಟೇಬಲ್ ಬಳಿ ಹಿಂತಿರುಗಿದವನಿಗೆ ಗೆಳೆಯರು ''ಯಾರ್ದು ಬ್ರದರ್ ಫೋನು'' ಎಂದಾಗ ''ಊರಿಂದ'' ಎಂದು ನಕ್ಕು ಸುಳ್ಳು ಹೇಳಿದ್ದ ಬ್ರೆಕ್ಸ್.

ಯಾವತ್ತೂ ಒಂದು ಬಿಯರ್ ಮೇಲೆ ಕುಡಿಯದಿದ್ದ ಬ್ರೆಕ್ಸ್ ಇಂದು ಒಂದೂವರೆ ಬಿಯರ್ ಕುಡಿದಿದ್ದರಿಂದಲೂ, ಅನೂಹ್ಯ ಎಂಬ ಕಾಡುವ ಸುಂದರಿ ತನ್ನನ್ನು ಭಾನುವಾರ ಪಾರ್ಟಿಗೆ ಆಹ್ವಾನಿಸಿದ್ದರಿಂದಲೂ ಅವನಲ್ಲಿ ಒಂಥರಾ ಹೇಳಿಕೊಳ್ಳಲಾರದಂಥ ಸಂವೇದನೆಗಳು ಗರಿಬಿಚ್ಚಿ ಕುಣಿಯಲಾರಂಭಿಸಿದವು. ಆಟೊದಲ್ಲಿ ಹಾಸ್ಟೆಲ್‌ಗೆ ಹಿಂತಿರುಗಿ ಊಟ ಮಾಡಿ ಮಲಗಿದ ಬ್ರೆಕ್ಸನಿಗೆ ಬೇಗನೆ ನಿದ್ದೆ ಆವರಿಸಿತ್ತು. ಬ್ರೆಕ್ಸನ ನಿದ್ದೆಯಲ್ಲಿ ಅಪರೂಪದ ಕನಸೊಂದು ಜನ್ಮ ತಾಳಿತ್ತು. ಆ ಕನಸೆಂಬ ಕನಸು ಹೀಗಿತ್ತು: ಮೂರನೇ ಸೆಮಿಸ್ಟರ್ ಪರೀಕ್ಷೆ ಮುಗಿಸಿ ಹದಿನೈದು ದಿನಗಳ ರಜ ಸಿಕ್ಕಿದ್ದರಿಂದ ಮಾಮೂಲಿಯಾಗಿ ಬ್ರೆಕ್ಸನು ತನ್ನ ಹಳ್ಳಿ ದ್ವಾರನಕುಂಟೆಗೆ ಬಂದಿದ್ದ. ಏಕೋ ಈ ಬಾರಿ ಬ್ರೆಕ್ಸನ ಮನಸ್ಸು ತನ್ನ ಮನೆ, ಕೇರಿ, ಊರನ್ನೆಲ್ಲ ಹೊಸದಾಗಿ ಪರಿಶೀಲಿಸುತ್ತಿತ್ತು. ಇಡೀ ತನ್ನ ಊರನ್ನೇ ಕಿತ್ತುಕೊಂಡು ಹೋಗಿ ಬೆಂಗಳೂರಿನ ತನ್ನ ಯೂನಿವರ್ಸಿಟಿ ಪಕ್ಕ ಇಟ್ಟುಕೊಂಡರೆ ಹೇಗಿರುತ್ತೆ ಎಂಬ ಆಲೋಚನೆ ಬಂದು, ತನ್ನ ಆಲೋಚನೆಗೆ ತಾನೇ ನಕ್ಕು ಸುಮ್ಮನಾದ. ಇಂಥ ಆಲೋಚನೆಯ ಹಿಂದೆ ಅನೂಹ್ಯ ಇರಬಹುದೆ? ಈಗ ತನ್ನ ಅಪ್ಪಅಮ್ಮನ ಸಮೇತ ಊರಿನಲ್ಲಿ ಎಲ್ಲರೂ ತನ್ನನ್ನು ಭರಮಣ್ಣ ಎಂದು ಕರೆಯದೆ ಬ್ರೆಕ್ಸ್ ಅಂತಲೇ ಕರೆಯುತ್ತಿದ್ದಾರೆ. ಅಂದು ಹನ್ನೊಂದು ಗಂಟೆಗೆಲ್ಲ ಹಿಟ್ಟುಂಡು ಬ್ರೆಕ್ಸ್ ಎಮ್ಮೆ ಮೇಯಿಸಲು ಹೊಲದ ಕಡೆ ಹೋಗೋಣವೆಂದು ಮನೆಯ ಮುಂದೆ ಗೂಟಕ್ಕೆ ಕಟ್ಟಿದ್ದ ಎಮ್ಮೆಯ ಹಗ್ಗವನ್ನು ಬಿಚ್ಚುತ್ತಿರುತ್ತಾನೆ. ಅದೇ ಟೈಮಿಗೆ ಮನೆಯ ಮುಂದೆ ಕೆಂಪು ಮಾರುತಿ ಕಾರೊಂದು ಬಂದು ನಿಲ್ಲುತ್ತದೆ. ಬ್ರೆಕ್ಸ್ ನೋಡ ನೋಡುತ್ತಿದ್ದಂತೆ ಅನೂಹ್ಯ ಇಳಿಯುತ್ತಾಳೆ! ಬ್ರೆಕ್ಸನಿಗೆ ಬಾಯಲ್ಲಿ ಮಾತುಗಳೇ ಇಮರಿ ಹೋದಂತಾಗುತ್ತದೆ. ಬೆರಗಾಗಿ ನಿಂತಿದ್ದ ಬ್ರೆಕ್ಸನನ್ನು ಕುರಿತು ''ಹಾಯ್ ಬ್ರೆಕ್ಸ್, ಏಕೋ ನಿನ್ನ ನೋಡಬೇಕೆನಿಸ್ತು. ಯೂನಿವರ್ಸಿಟಿಗೆ ಫೋನ್ ಮಾಡ್ದೆ. ಅಡ್ರಸ್ ಕೊಟ್ರು. ಸೀದಾ ಕಾರು ಹತ್ತಿ ಹೊರಟು ಬಂದೆ. ಇಂಥ ಅನಿರೀಕ್ಷಿತಗಳು ಎಷ್ಟು ಖುಷಿ ಕೊಡ್ತಾವೆ ಗೊತ್ತಾ. ನನಗೆ ಹಳ್ಳಿ ಅಂದ್ರೆ ಪ್ರಾಣ. ಹಾಗಾಗಿ ನಿನ್ನ ಜೊತೆ ಒಂದಿನ ಇದ್ದು ಹೋಗೋಣ ಅಂತ ಬಂದೆ'' ಎಂದು ಬ್ರೆಕ್ಸನ ಮನೆಯನ್ನು ಪ್ರವೇಶಿಸಿ ಬ್ರೆಕ್ಸನ ಅಮ್ಮ ಚಾಪೆ ಹಾಕುವ ಮುನ್ನವೇ ಬರಿ ನೆಲದ ಮೇಲೆ ಕುಳಿತುಕೊಂಡಿದ್ದಳು. ಸೀರೆಯಲ್ಲಿ ಅನೂಹ್ಯ ಮತ್ತಷ್ಟು ಸುಂದರವಾಗಿ ಕಂಗೊಳಿಸುತ್ತಿದ್ದಳು. ಕೇರಿಯ ಜನರೆಲ್ಲಾ ಬಂದು ಇಣುಕಿ ಇಣುಕಿ ನೋಡಿ ಹೋಗುತ್ತಿದ್ದರು. ಕೆಲವರನ್ನು ಅನೂಹ್ಯ ತಾನೇ ಪರಿಚಯಿಸಿಕೊಂಡು ಮಾತನಾಡಿಸುತ್ತಿದ್ದಳು.

''ಅಮ್ಮಮ್ಮ ಎಷ್ಟು ರೂಪವಂತೆಯಮ್ಮ ಹುಡುಗಿ, ಇದುವರೆಗೂ ಇಂಥ ಸೌಂದರ್ಯವತಿ ನಮ್ಮ ಕೇರಿಗೆ ಕಾಲಿಟ್ಟಿದ್ದನ್ನು ನೋಡಿಯೇ ಇಲ್ಲ...''

''ಅಬ್ಬಬ್ಬಾ ಯಾವ ದೇಶದ ರಾಜಕುಮಾರಿನೋ. ನಮ್ಮ ಭರಮಣ್ಣ ಏನು ಮಾಯಮಾಟ ಮಾಡಿದ್ನೋ. ಅವಳೇ ಹುಡುಕಿಕೊಂಡು ಬಂದವ್ಳೆ ಅಂದ್ರೆ...'' ''ನಮ್ಮ ಚಿಕ್ಕಮಾರನ ಮನೆಗೆ ಬಂಗಾರದಂಥ ಹುಡುಗಿ ಕಾಲಿಟ್ಟವ್ಳೆ. ಇನ್ನವನ ಮನೆ ಚಿನ್ನ ಆಗೋಗ್ತೈತೆ.'' ''ಬ್ರಾಂಬ್ರುಡ್ಗಿ ಇದ್ದಂಗವ್ಳೆ. ನಮ್ಮ ಜನ ಬ್ರಾಂಬ್ರುನ್ನ ಮುಟ್ಬಾರ್ದು. ಭರಮಣ್ಣ ಸುಟ್ಟು ಕರುಕ್ಲಾಗ್ಬಿಡ್ತಾನೆ ನೋಡ್ಕಳ್ರಿ...'' ''ಏನದ್ರುಷ್ಟ ಮಾಡಿ ಹುಟ್ಟವನೆ ನಮ್ಮ ಭರಮಣ್ಣ. ಹಾಲಲ್ಲಿ ಕೈ ತೊಳ್ದು ಮುಟ್ಟಂಗವ್ಳೆ...'' ಮುಂತಾಗಿ ಕೇರಿಯ ಹೆಂಗಸರು ಮಾತನಾಡಿಕೊಂಡಿದ್ದರು. ಹಟ್ಟಿಯ ಯುವಕರಂತೂ ''ಯಾವ ಹೀರೋಯಿನ್‌ಗಿಂತ್ಲೂ ಕಡ್ಮೆ ಇಲ್ಲ ಕಣ್ರೊ. ಭರ್ಮ ಬಂಪರ್ ಲಾಟ್ರಿ ಹೊಡ್ದ'' ಎಂದು ಒಳೊಳಗೆ ಹೊಟ್ಟೆ ಉರಿಸಿಕೊಂಡಿದ್ದರು.

ಅನೂಹ್ಯ ಬ್ರೆಕ್ಸನೊಂದಿಗೆ ಊರು ಹೊಲವನ್ನೆಲ್ಲ ತಿರುಗಾಡಿದ್ದಳು. ಬ್ರೆಕ್ಸನ ಅಮ್ಮ ನರಸಮ್ಮ